ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 26-01-1970

*ಸ್ಮೃತಿ ಯಾತ್ರೆಯ ಸಂಪೂರ್ಣ ಸ್ಥಿತಿ* (याद के यात्रा की सम्पूर्ण स्टेज)

ಬಾಪ್ ದಾದಾ ಸಹ ಇಲ್ಲಿ ಕುಳಿತುಕೊಂಡಿದ್ದಾರೆ ಮತ್ತು ತಾವೂ ಇಲ್ಲಿಯೇ ಕುಳಿತುಕೊಂಡಿದ್ದೀರಿ, ಆದರೆ ಬಾಪ್ ದಾದಾ ಮತ್ತು ತಮ್ಮಲ್ಲಿ ಏನು ಅಂತರವಿದೆ? ಮೊದಲೂ ಸಾಕಾರ ರೂಪದಲ್ಲಿ ಇಲ್ಲಿ ಕುಳಿತುಕೊಳ್ಳುತ್ತಿದ್ದರು ಆದರೆ ಈಗ ಕುಳಿತುಕೊಳ್ಳುವಾಗ ಏನು ಅನುಭವವಾಗುತ್ತದೆ? ಸಾಕಾರದಲ್ಲಿ ತಂದೆಯ ಬಳಿಗೆ ಶರೀರವನ್ನು ಆಧಾರವಾಗಿ ತೆಗೆದುಕೊಂಡು ಬಂದಿದ್ದಾರೆ ಎಂದು ತಿಳಿಯುತ್ತಿದ್ದರು. ಅದೇ ತರಹದ ಅನುಭವ ಈಗಲೂ ಆಗುತ್ತದೆ. ಈಗ ಅತಿಥಿಯಾಗಿ ಬರುತ್ತಾರೆ. ತಾವೆಲ್ಲರೂ ಸಹ ತಮ್ಮನ್ನು ಅತಿಥಿಯೆಂದು ತಿಳಿಯುತ್ತೀರಿ. ಆದರೆ ತಾವೂ ತಿಳಿಯುವುದಕ್ಕೂ ತಂದೆ ತಿಳಿಯುವುದಕ್ಕೂ ಅಂತರವಿದೆ. ಅತಿಥಿಯೆಂದು ಯಾರನ್ನು ಕರೆಯಲಾಗುತ್ತದೆ. ಯಾರು ಬರುತ್ತಾರೆ ಮತ್ತು ಹೋಗುತ್ತಾರೆ ಅವರಿಗೆ. ಬರುವುದು  ಮತ್ತೆ ಹೋಗಲು. ಅದಾಗಿತ್ತು ಬುದ್ಧಿಯೋಗದ ಅನುಭವ, ಇದಾಗಿದೆ ಪ್ರಾಯೋಗಿಕ ಅನುಭವ. ಬೇರೆ ಶರೀರದಲ್ಲಿ ಪ್ರವೇಶವಾಗಿ ಹೇಗೆ ಕರ್ತವ್ಯ ಮಾಡುವುದು ಎಂಬ ಈ ಅನುಭವ ತಂದೆಯ ಸಮಾನ ಮಾಡಬೇಕು. ದಿನದಿನಕ್ಕೆ ಬಹಳಷ್ಟು ನಿಮ್ಮ ಸ್ಥಿತಿ ಸಮಾನವಾಗುವುದು. ನಿಜವಾಗಿ ಶರೀರವನ್ನು ಆಧಾರವಾಗಿ (ಲೋನ್) ತೆಗೆದುಕೊಂಡು ಕರ್ತವ್ಯಕ್ಕಾಗಿ ಅತಿಥಿಯಾಗಿದ್ದೇವೆ ಎಂಬ ಅನುಭವವನ್ನು ತಾವೂ ಮಾಡುವಿರಿ. ಎಲ್ಲಿಯವರೆಗೆ ತಮ್ಮನ್ನು ಅತಿಥಿ ಎಂದು ತಿಳಿಯುವುದಿಲ್ಲವೋ ಅಲ್ಲಿಯವರೆಗೆ ಅತೀತ (ನಿರ್ಲಿಪ್ತ) ಸ್ಥಿತಿಯಾಗುವುದಿಲ್ಲ. ಯಾರು ಹೆಚ್ಚು ನಿರ್ಲಿಪ್ತ ಸ್ಥಿತಿಯಲ್ಲಿ ಇರುತ್ತಾರೋ, ಅವರ ಸ್ಥಿತಿಯಲ್ಲಿ ಯಾವ ವಿಶೇಷತೆ ಇರುತ್ತದೆ? ಅವರ ಮಾತಿನಿಂದ, ನಡತೆಯಿಂದ ಉಪರಾಮ ಸ್ಥಿತಿಯ ಅನುಭವ ಬೇರೆಯವರಿಗೆ ಆಗುವುದು. ಎಷ್ಟು ಸ್ಥಿತಿ ಮೇಲಕ್ಕೆ ಹೋಗುವುದೋ ಅಷ್ಟು ಉಪರಾಮ ಆಗುವರು. **ಶರೀರದಲ್ಲಿ ಇರುತ್ತಿದ್ದರೂ ಉಪರಾಮ ಸ್ಥಿತಿಯವರೆಗೆ ತಲುಪಬೇಕು. ದೇಹ ಮತ್ತು ದೇಹಿ ಇಬ್ಬರೂ ಪೂರ್ಣ ಬೇರೆ ಎಂದು ಅನುಭವಕ್ಕೆ ಬರಬೇಕು. ಅದನ್ನೇ ನೆನಪಿನ ಯಾತ್ರೆಯ ಸಂಪೂರ್ಣ ಸ್ಥಿತಿ ಎಂದು ಕರೆಯಲಾಗುತ್ತದೆ ಅಥವಾ ಯೋಗದ ಪ್ರಾಯೋಗಿಕ ಸಿದ್ಧಿ.** ಮಾತನಾಡುತ್ತಲೇ ನಿರ್ಲಿಪ್ತತೆ ಆಕರ್ಷಿಸಬೇಕು. ಮಾತುಗಳನ್ನು ಕೇಳುತ್ತಿದ್ದರೂ ಕೇಳದೇ ಇರುವಂತಿರಬೇಕು. ಈ ರೀತಿಯ ಅನುಭವ ಬೇರೆಯವರಿಗೂ ಆಗಬೇಕು. ಇಂತಹ ಸ್ಥಿತಿಗೆ ಕರ್ಮಾತೀತ ಅವಸ್ಥೆ ಎಂದು ಹೇಳಲಾಗುತ್ತದೆ. ಕರ್ಮಾತೀತ ಎಂದರೆ ದೇಹದ ಬಂಧನದಿಂದ ಮುಕ್ತ ನಿರ್ಲಿಪ್ತರಾಗಿರುವಿರಿ, ಯಾವ ಎಳೆತವೂ ಇರದಂತೆ ಕರ್ಮ ಮಾಡಿದಾಗ ಆ ಕರ್ಮಗಳ ಖಾತೆ ತಯಾರಾಗುವುದಿಲ್ಲ. ಕರ್ಮ ಮಾಡುವವನು ಬೇರೆ, ಕರ್ಮ ಬೇರೆ ಎಂಬ ಅನುಭವ ದಿನದಿನಕ್ಕೆ ಆಗುವುದು. ಈ ಅವಸ್ಥೆಯಲ್ಲಿ ಜಾಸ್ತಿ ಬುದ್ಧಿಯನ್ನು ಉಪಯೋಗಿಸುವ ಅವಶ್ಯಕತೆಯಿಲ್ಲ. ಸಂಕಲ್ಪ ಬಂದಾಕ್ಷಣ ಏನಾಗಬೇಕೋ ಅದೇ ಆಗುವುದು. ಇಂತಹ ಸ್ಥಿತಿಯಲ್ಲಿ ಎಲ್ಲರೂ ಬರಬೇಕು. ಮೂಲವತನಕ್ಕೆ ಹೋಗುವ ಮೊದಲು ಸೂಕ್ಷ್ಮವತನದಿಂದ ಹೋಗಬೇಕು. ಅಲ್ಲಿ ಎಲ್ಲರೂ ಬಂದು ಸೇರಬೇಕು ನಂತರ ತಮ್ಮ ಮನೆಗೆ ಹೋಗಿ ಮತ್ತೆ ತಮ್ಮ ರಾಜ್ಯಕ್ಕೆ ಬರುವಿರಿ. ಹೇಗೆ ಸಾಕಾರ ವತನದಲ್ಲಿ ಕುಂಭಮೇಳ ಆಗಿದೆಯೋ ಹಾಗೆಯೇ ಸೂಕ್ಷ್ಮವತನದಲ್ಲಿಯೂ ಆಗುವುದು, ಆ ಫರಿಶ್ತಾರ ಮೇಳ ಸಮೀಪವಿದೆ. ಕಥೆಗಳನ್ನು ಹೇಳುತ್ತಾರಲ್ಲವೇ? ಫರಿಸ್ತೆಗಳು ಪರಸ್ಪರ ಭೇಟಿಯಾಗುತ್ತಿದ್ದರು, ಆತ್ಮರ ಜೊತೆಗೆ ಮಾತನಾಡುತ್ತಿದ್ದರು ಎಂಬ ಅನುಭವವನ್ನು ಮಾಡುವಿರಿ, ಹಾಗಾದರೆ ಯಾವ ಕಥೆಗಳ ಗಾಯನವಿದೆಯೋ ಅದರ ಪ್ರಾಯೋಗಿಕ ಅನುಭವವಾಗುವುದು. ಆ ಮೇಳೆಯ ದಿನಗಳ ನಿರೀಕ್ಷೆಯಿದೆ.

ಈಗ ಸೇವೆಗೆ ನಿಮಿತ್ತರಾಗಿರುವಿರಿ. ಎಲ್ಲವನ್ನೂ ಮರೆತು ಕುಳಿತಿದ್ದೀರಿ. ಆ ಅವ್ಯಕ್ತ ಸ್ಥಿತಿಯಲ್ಲಿ ಮನ ಮತ್ತು ತನು ವ್ಯಕ್ತ ದೇಶದಲ್ಲಿವೆ. ಈ ರೀತಿ ಅನುಭವವಾಗುತ್ತದೆಯೇ?ಒಳ್ಳೆಯದು. ತಮ್ಮನ್ನು ಎಲ್ಲಿಯ ನಿವಾಸಿ ಎಂದು ತಿಳಿಯುತ್ತೀರಿ? ಪರಂಧಾಮ ನಿವಾಸಿ ಎಂದು ತಿಳಿಯುತ್ತೀರಾ? ಇದು ಎಷ್ಟು ಸಮಯ ನೆನಪಿರುತ್ತದೆ? **ನಾವು ಪರಮಧಾಮ ನಿವಾಸಿ ಆತ್ಮ ಈ ವ್ಯಕ್ತ ದೇಶದಲ್ಲಿ ಈಶ್ವರೀಯ ಕರ್ತವ್ಯ ಮಾಡಲು ನಿಮಿತ್ತರಾಗಿ ಬಂದಿದ್ದೇವೆ** ಎಂಬ ಒಂದೇ ಮಾತು ನೆನಪಿರಲಿ, ಮಧುಬನಕ್ಕೆ ಬಂದು ವಿಶೇಷ

ಯಾವ ಗುಣ ಪಡೆದಿದ್ದೀರಿ? ಮಧುಬನದ ವಿಶೇಷ ಗುಣವಾಗಿದೆ ಮಧುರತೆ. ಮಧು ಎಂದರೆ ಮಧುರತೆ, ಸ್ನೇಹಿ, ಎಷ್ಟು ಸ್ನೇಹಿಯಾಗಿರುವಿರೋ ಅಷ್ಟು ಬೇಹದ್ದಿನ ವೈರಾಗ್ಯವಿರುವುದು. ಇದೇ ಮಧುಬನದ ಅರ್ಥ ಇದಾಗಿದೆ. ಅತಿ ಸ್ನೇಹಿ ಮತ್ತು ಅಷ್ಟೇ ಬೇಹದ್ದಿನ ವೈರಾಗ್ಯದ ವೃತ್ತಿ. ಮಧುಬನದ ವಿಶೇಷ ಗುಣವನ್ನು ಜೀವನದಲ್ಲಿ ಧಾರಣೆ ಮಾಡಿಕೊಂಡು ಹೋದರೆ ಸಹಜವಾಗಿ ಸಂಪೂರ್ಣವಾಗುವಿರಿ. ನಂತರ ಆತ್ಮಿಕ ಶಿಕ್ಷಕಿಯರಾದಲ್ಲಿ ನಂಬರವನ್ ಆಗಬಹುದು. ಏಕೆಂದರೆ ಹೇಗೆ ತಮ್ಮ ಧಾರಣೆಯೋ ಹಾಗೆ ಬೇರೆಯವರಿಗೆ ಅನುಭವ ಮಾಡಿಸುವಿರಿ. ಈ ಎರಡೂ ಗುಣಗಳ ಧಾರಣೆಯನ್ನು ತಮ್ಮಲ್ಲಿ ಮಾಡಿಕೊಳ್ಳಬೇಕು. ಮಧುಬನದ ರೇಖೆಗಳ ಹೊರಗೆ ಹೋಗುವ ಮೊದಲು ತಮ್ಮಲ್ಲಿ ಪೂರ್ಣ ರೀತಿ ಇದನ್ನು ತುಂಬಿಕೊಂಡು ಹೋಗಿ. ಒಂದು ಸ್ನೇಹದಿಂದ, ಇನ್ನೊಂದು ಬೇಹದ್ದಿನ ವೈರಾಗ್ಯದ ವೃತ್ತಿಯಿಂದ, ಯಾವುದೇ ಪರಿಸ್ಥಿತಿಗಳನ್ನು ಸಹಜವಾಗಿ ಎದುರಿಸುವಿರಿ. ಸಫಲತೆಯ ನಕ್ಷತ್ರವಾಗಲು ಈ ಎರಡು ಗುಣಗಳನ್ನು ಮುಖ್ಯವಾಗಿ ಮಧುಬನದ ಕಾಣಿಕೆಯಾಗಿ ತೆಗೆದುಕೊಂಡು ಹೋಗಿರಿ. ಎಲ್ಲಿಗಾದರೂ ಹೋಗುವುದಾದರೆ ಅಲ್ಲಿಯ ವಿಶೇಷ ವಸ್ತುವೇನೆಂದು ವಿಚಾರಿಸುತ್ತಾರೆ, ಅಲ್ಲಿಯ ಪ್ರಸಿದ್ಧ ವಿಶೇಷ ವಸ್ತುವನ್ನು ಜೊತೆಗೆ ತೆಗೆದುಕೊಂಡು ಹೋಗುತ್ತಾರೆ. ಆದ್ದರಿಂದ ಈ ಮಧುಬನದ ಎರಡು ವಿಶೇಷ ಗುಣಗಳನ್ನು ತಮ್ಮೊಂದಿಗೆ ತೆಗೆದುಕೊಂಡು ಹೋಗಿರಿ. ಮಧುವನ್ನು(ಜೇನು) ಹೇಗೆ ತೆಗೆದುಕೊಂಡು ಹೋಗಲಾಗುತ್ತದೆಯೋ ಹಾಗೆಯೇ ಸೂಕ್ಷ್ಮ ಮಧುರತೆಯ ಮಧುವನ್ನು ತೆಗೆದುಕೊಂಡು ಹೋಗಿ, ಆಗ ಸಫಲತೆಯೇ ಸಫಲತೆಯಿದೆ. ಅಸಫಲತೆ ತಮ್ಮ ಜೀವನದಿಂದ ದೂರವಾಗುವುದು. ಸಫಲತೆಯ ನಕ್ಷತ್ರ ತಮ್ಮ ಮಸ್ತಕದಲ್ಲಿ ಹೊಳೆಯುತ್ತಿರುವುದನ್ನು ನೋಡುವಿರಿ.

**ನೀವು ಸಫಲತೆಯ ನಕ್ಷತ್ರವಾಗಿದ್ದೀರೋ ಅಥವಾ ಪುರುಷಾರ್ಥದ ನಕ್ಷತ್ರವಾಗಿದ್ದೀರೋ? ಏನೆಂದು ತಿಳಿಯುತ್ತೀರಿ? ಹೇಗೆ ಲಕ್ಷ್ಯವೋ ಹಾಗೆಯೇ ಲಕ್ಷಣವಿರುತ್ತವೆ. ಇನ್ನೂವರೆಗೂ ನಾವು ಪುರುಷಾರ್ಥಿಗಳೆಂದು ತಿಳಿದರೆ ಅನೇಕ ಸಣ್ಣಪುಟ್ಟ ತಪ್ಪುಗಳನ್ನು ಕ್ಷಮೆ ಮಾಡಿಕೊಳ್ಳುವಿರಿ. ನಾವಂತೂ ಪುರುಷಾರ್ಥಿಗಳೆಂದು ತಿಳಿದುಕೊಳ್ಳುತ್ತೀರಿ, ಆದ್ದರಿಂದ ಈಗ ಪುರುಷಾರ್ಥಿಯಲ್ಲ ಆದರೆ ಸಫಲತೆಯ ಸ್ವರೂಪರಾಗಬೇಕು**. ಎಲ್ಲಿಯವರೆಗೆ ಪುರುಷಾರ್ಥದಲ್ಲಿರುವಿರಿ? ಯಾವಾಗ ಸ್ವಯಂ ಸಫಲತೆಯ ಸ್ವರೂಪರಾಗುವಿರೋ. ಆಗ ಬೇರೆ ಆತ್ಮರಿಗೆ ಸಫಲತೆಯ ಮಾರ್ಗವನ್ನು ತೋರಿಸುವಿರಿ. ಒಂದು ವೇಳೆ ತಾವೇ ಅಂತ್ಯದವರೆಗೂ ಪುರುಷಾರ್ಥಿಯಾಗಿದ್ದರೆ ಸಂಗಮದ ಪ್ರಾಲಬ್ಧವನ್ನು ಯಾವಾಗ ಅನುಭವಮಾಡುವಿರಿ? ಈ ಜೀವನವೆಲ್ಲಾ ಪುರುಷಾರ್ಥಿಗಳಾಗಿಯೇ ಇರುವಿರಾ? ಈ ಸಂಗಮಯುಗದ ಪ್ರಾಲಬ್ಧ ಪ್ರತ್ಯಕ್ಷ ರೂಪದಲ್ಲಿ ಪಡೆಯುವುದಿಲ್ಲವೇ? ಸಂಗಮದ ಪುರುಷಾರ್ಥದ ಫಲವೇನು? (ಸಫಲತೆ), ಹಾಗಾದರೆ ಸಫಲತೆಯ ಸ್ವರೂಪದ ನಿಶ್ಚಯ ಮಾಡುವುದರಿಂದಲೂ ಸಫಲತೆಯಾಗುತ್ತಿರುತ್ತದೆ. ಯಾವಾಗ ನಾನು ಸಫಲತೆಯ ನಕ್ಷತ್ರವೆಂದು ತಿಳಿಯುತ್ತೀರೋ ಆಗ ಅಸಫಲತೆ ಹೇಗೆ ಬರಲು ಸಾಧ್ಯ? ಸರ್ವ ಶಕ್ತಿವಂತನ ಮಕ್ಕಳು ಯಾವುದೇ ಕೆಲಸದಲ್ಲಿ ಅಸಫಲರಾಗುವುದಿಲ್ಲ. ತಮ್ಮ ಮಸ್ತಕದಲ್ಲಿ ವಿಜಯದ ನಕ್ಷತ್ರ ನೋಡುತ್ತೀರೋ ಅಥವಾ ನೋಡುವಿರೋ? ವಿಜಯವಂತೂ ನಿಶ್ಚಿತವಾಗಿದೆಯಲ್ಲವೇ? ವಿಜಯ ಎಂದರೆ ಸಫಲತೆ. ಈಗ ಸಮಯ ಬದಲಾಗುತ್ತಿದೆ. ಸಮಯ ಬದಲಾದಾಗ ತಮ್ಮ ಪುರುಷಾರ್ಥವನ್ನೂ ಬದಲಾಯಿಸುವಿರಲ್ಲವೇ? ಈಗ ತಂದೆ ಸಫಲತೆಯ ರೂಪವನ್ನು ತೋರಿಸಿದರು ಹಾಗಾದರೆ ಮಕ್ಕಳೂ ರೂಪದಲ್ಲಿ ವ್ಯಕ್ತ ದೇಹದಲ್ಲಿರುತ್ತಾ ಸಫಲತೆಯ ರೂಪವನ್ನು ತೋರಿಸುವುದಿಲ್ಲವೇ? ತಮ್ಮನ್ನು ಸದಾ ಸಫಲತೆಯ ಮೂರ್ತಿ ಎಂದು ತಿಳಿಯಿರಿ. ನಿಶ್ಚಯವನ್ನು ವಿಜಯ ಎಂದು ಕರೆಯಲಾಗುತ್ತದೆ. ಹೇಗೆ ವಿಶ್ವಾಸವಿರುವುದೋ ಅದೇ ರೀತಿ ಕರ್ಮವಾಗುವುದು. ನಿಶ್ಚಯದಲ್ಲಿ ಕೊರತೆಯಿದ್ದರೆ ಕರ್ಮದಲ್ಲಿಯೂ ಕೊರತೆಯಿರುವುದು. ಸ್ಮೃತಿ ಶಕ್ತಿಶಾಲಿಯಾಗಿದ್ದರೆ ಸ್ಥಿತಿ ಮತ್ತು ಕರ್ಮವೂ ಶಕ್ತಿಶಾಲಿಯಾಗುವುದು. ಆದ್ದರಿಂದ ಎಂದಿಗೂ ತಮ್ಮ ಸ್ಮೃತಿಯನ್ನು ದುರ್ಬಲ ಮಾಡಿಕೊಳ್ಳಬೇಡಿ. ಶಕ್ತಿದಳ ಮತ್ತು ಪಾಂಡವರು ಎಂದಾದರೂ ಅಸಫಲರಾಗಬಹುದೇ? ಪಾಂಡವರು ಏನು ಮಾಡಿದ್ದರು ಎಂಬ ತಮ್ಮ ಕಲ್ಪದ ಹಿಂದಿನ ಮಾತು ನೆನಪಿದೆಯೇ? ವಿಜಯಿಯಾಗಿದ್ದರು? ಹಾಗಾದರೆ ಈಗ ತಮ್ಮ ಸ್ಮೃತಿಯನ್ನು ಶ್ರೇಷ್ಠ ಮಾಡಿಕೊಳ್ಳಿ, ಈಗ ಸಂಗಮದಲ್ಲಿ ವಿಜಯದ ತಿಲಕ, ನಂತರ ಈ ವಿಜಯದ ತಿಲಕದಿಂದ ರಾಜ್ಯತಿಲಕ, ಈ ವಿಜಯದ ತಿಲಕವನ್ನು ಯಾರೂ ಅಳಿಸಲಾರರು. ಹೀಗೆ ನಿಶ್ಚಯವಿದೆಯೇ? ವಿಜಯೀ ರತ್ನಗಳ ಪ್ರತಿಯೊಂದು

ಮಾತಿನಲ್ಲಿ ವಿಜಯವೇ ವಿಜಯವಿದೆ. ಅವರ ಸೋಲು ಆಗಲು ಸಾಧ್ಯವಿಲ್ಲ. ಬಹಳ ಜನ್ಮ ಸೋಲನ್ನು ಅನುಭವಿಸಿದ್ದೀರಿ, ವಿಜಯ ಪಡೆದ ಮೇಲೆ ಸೋಲೇಕೆ? "ವಿಜಯ ನಮ್ಮದೇ ಆಗಿದೆ" ಹೀಗೆ ಒಂದೇ ಬಲ & ಒಂದೇ ಭರವಸೆಯಿರಲಿ.

(ಮಕ್ಕಳು ಜ್ಞಾನದಲ್ಲಿ ಇರದಿದ್ದರೆ ಏನು ಮಾಡುವುದು?) ಯಾರಾದರೂ ಈ ಮಾರ್ಗದಲ್ಲಿಲ್ಲವೆಂದರೆ ಮದುವೆ ಮಾಡಿಕೊಳ್ಳಬಹುದು, ಅವರ ದುರ್ಬಲತೆಯನ್ನು ತಮ್ಮ ಮೇಲಿಂದ ದೂರ ಮಾಡಿಕೊಳ್ಳಬೇಕು, ಸಾಕ್ಷಿಯಾಗಿ ಅನಿವಾರ್ಯವಾಗಿ ಮಾಡಬೇಕು. ಅದಾಗಿದೆ ಕರ್ತವ್ಯ, ಎಳೆತವಲ್ಲ. ಕರ್ತವ್ಯವನ್ನು ನಿಭಾಯಿಸುತ್ತಿದ್ದೀರಿ. ಒಂದು ಎಳೆತದಿಂದ ಮಾಡುವುದು, ಒಂದು ನಿಮಿತ್ತ ಕರ್ತವ್ಯವನ್ನು ನಿಭಾಯಿಸುವುದು, ಒಂದೇ ಸಮಯದಲ್ಲಿ ಈ ಜನ್ಮಸಿದ್ಧ ಅಧಿಕಾರ ಪಡೆಯುವ ಪಾತ್ರ ಎಲ್ಲ ಆತ್ಮರದಲ್ಲ. ಪರಿಚಯ ಪಡೆಯುವುದು ಅವಶ್ಯವಾಗಿದೆ, ಅರಿಯುವುದು ಇದೆ ಆದರೆ ಕೆಲವರ ಪಾತ್ರ ಈಗ ಇದೆ ಇನ್ನು ಕೆಲವರ ಪಾತ್ರ ನಂತರವಿದೆ. ಕೆಲವು ಬೀಜಗಳು ತಕ್ಷಣ ಫಲ ಕೊಡುತ್ತವೆ, ಕೆಲವು ನಂತರ ಫಲ ಕೊಡುತ್ತವೆ. ಅದೇ ರೀತಿ ಇಲ್ಲಿಯೂ ಪ್ರತಿಯೊಬ್ಬರ ಪಾತ್ರ ತಮ್ಮದೇ ಸಮಯದಲ್ಲಿದೆ, ಕೆಲವು ತಡವಾಗಿ ಫಲ ಕೊಡುತ್ತವೆ. ಕರ್ತವ್ಯವೆಂದು ತಿಳಿದರೆ ಮಾಯೆಯ ಪ್ರಭಾವದಲ್ಲಿ ಬರುವುದಿಲ್ಲ. ಇಲ್ಲವಾದರೆ ವಾಯುಮಂಡಲದ ಪ್ರಭಾವ ಆಗುವುದು. ಆದ್ದರಿಂದ ಕರ್ತವ್ಯವೆಂದು ತಿಳಿದು ಮಾಡಬೇಕು. ಕರ್ತವ್ಯ ಮತ್ತು ಪ್ರಭಾವ (ಪರ್ಜ್ & ಮರ್ಜ್) ದಲ್ಲಿ ಕೇವಲ ಒಂದು ಬಿಂದುವಿನ ಅಂತರವಿದೆ. ಆದರೆ ಬಿಂದುವಿನ ರೂಪದಲ್ಲಿ ಇರದಿರುವ ಕಾರಣ ಕರ್ತವ್ಯವೂ ಪ್ರಭಾವವಾಗಿಬಿಡುತ್ತದೆ. ಸಹಯೋಗಿಗಳಿಗೆ ಸಹಯೋಗ ಸದಾ ಸಿಗುತ್ತದೆ. ತಂದೆಯ ಸಹಯೋಗ ಪ್ರತಿಯೊಂದು ಕಾರ್ಯದಲ್ಲಿ ಹೇಗೆ ಸಿಗುತ್ತದೆ ಈ ಅನುಭವವಾಗುತ್ತದೆಯೇ? ಪರಸ್ಪರರಲ್ಲಿ ವಿಶೇಷ ಗುಣವನ್ನು ನೋಡಿ ಮುಂದಿಡಬೇಕು. ಯಾರನ್ನಾದರೂ ಮುಂದಿಡುವುದೇ ತಮ್ಮನ್ನು ಮುಂದುವರೆಸಿಕೊಂಡಂತೆ.

ಶಿವ ಜಯಂತಿಯಲ್ಲಿ ಸಂದೇಶ ಹರಡಿಸುವುದು ಸಹಜವಾಗುತ್ತದೆ, ಎಷ್ಟು ಸಾಧ್ಯವೋ ಅಷ್ಟು ಮಾಡಿರಿ ಏಕೆಂದರೆ ನಂತರ ಬರುವ ಸಮಯದಲ್ಲಿ ಸೇವೆ ಮಾಡುವುದಕ್ಕೂ ಅವಕಾಶ ಕಡಿಮೆ ಸಿಗುವುದು. ತಪ್ಪುಗಳು ಏಕೆ ಆಗುತ್ತವೆ? ಅದರ ಆಳಕ್ಕೆ ಹೋಗಬೇಕು. ಈ ತಪ್ಪು ಏಕೆ ಆಯಿತೆಂದು ಅಂತರ್ಮುಖಿಯಾಗಿ ಯೋಚಿಸಬೇಕು? ಇದು ಮಾಯೆಯ ರೂಪವಾಗಿದೆ. ನಾನು ರಚಯಿತ ತಂದೆಯ ಮಗುವಾಗಿದ್ದೇನೆ. ಏಕಾಂತದಲ್ಲಿ ತಮ್ಮೊಂದಿಗೆ ಈ ರೀತಿ ಮಾತನಾಡಿ, ಮೆಲುಕು ಹಾಕಲು ಪ್ರಯತ್ನ ಮಾಡಿ, ಎಲ್ಲಿಗಾದರೂ ಹೋದರೆ ತಮ್ಮ ಸ್ಮೃತಿಚಿಹ್ನೆ ಬಿಟ್ಟು ಅಲ್ಲಿಂದ ಏನಾದರೂ ತೆಗೆದುಕೊಂಡು ಹೋಗಬೇಕು. ಹಾಗಾದರೆ ಮಧುಬನದಲ್ಲಿ ವಿಶೇಷವಾದ ಯಾವ ಸ್ಮೃತಿಚಿಹ್ನೆಯನ್ನು ಬಿಟ್ಟಿರುವಿರಿ? ಒಂದೊಂದು ಆತ್ಮನ ಬಳಿ ಈ ಈಶ್ವರೀಯ ಸ್ನೇಹ ಮತ್ತು ಸಹಯೋಗದ ಸ್ಮೃತಿಚಿಹ್ನೆಯನ್ನು ಬಿಡಬೇಕು. ಎಷ್ಟೆಷ್ಟು ಪರಸ್ಪರ ಸ್ನೇಹಿ ಸಹಯೋಗಿಯಾಗುವಿರೋ ಅಷ್ಟಷ್ಟು ಮಾಯೆಯ ವಿಘ್ನಗಳನ್ನು ನಾಶಮಾಡಲು ಸಹಯೋಗ ಸಿಗುತ್ತದೆ. ಸಹಯೋಗ ಕೊಡುವುದು ಎಂದರೆ ಸಹಯೋಗ ಪಡೆಯುವುದು. ಪರಿವಾರದಲ್ಲಿ ಆತ್ಮಿಕ ಸ್ನೇಹ ಕೊಡುವುದು ಮತ್ತು ಮಾಯೆಯ ಮೇಲೆ ವಿಜಯ ಪಡೆಯುವ ಸಹಯೋಗ ಪಡೆಯುವುದು, ಈ ಕೊಡುವ ತೆಗೆದುಕೊಳ್ಳುವ ಲೆಕ್ಕ ಸರಿಯಾಗಿರುತ್ತದೆ. ಈ ಸಂಗಮ ಸಮಯದಲ್ಲಿ ಆನೇಕ ಜನ್ಮಗಳ ಸಂಬಂಧ ಜೋಡಿಸಬೇಕಾಗಿದೆ. ಸ್ನೇಹವಾಗಿದೆ ಸಂಬಂಧ ಜೋಡಿಸುವ ಸಾಧನ ಬಟ್ಟೆಗಳನ್ನು ಜೋಡಿಸುವ ಸಾಧನ ದಾರವಾಗಿದೆ, ಹಾಗೆಯೇ ಭವಿಷ್ಯ ಸಂಬಂಧ ಜೋಡಿಸುವ ಸಾಧನವಾಗಿದೆ ಸ್ನೇಹರೂಪದ ದಾರ, ಇಲ್ಲಿ ಹೇಗೆ ಜೋಡಿಸುವಿರೋ ಹಾಗೆ ಅಲ್ಲಿ ಜೋಡಣೆಯಾಗಿರುವುದೇ ಸಿಗುವುದು. ಜೋಡಿಸುವ ಸಮಯ ಮತ್ತು ಸ್ಥಾನ ಇದಾಗಿದೆ. ಅನೇಕರ ಜೊತೆಗಿನ ಸ್ನೇಹ ಸಮಾಪ್ತಿಯಾದಾಗ ಈಶ್ವರೀಯ ಸ್ನೇಹ ಜೋಡಿಸಲ್ಪಡುತ್ತದೆ. ಹಾಗಾದರೆ ಈಗ ಆನೇಕ ಸ್ನೇಹ ಸಮಾಪ್ತಿ ಮಾಡಿ ಒಂದು ಸ್ನೇಹದಲ್ಲಿ ಜೋಡಿಸಲ್ಪಡಬೇಕು. ಆ ಅನೇಕರ ಸ್ನೇಹವೂ ವ್ಯಾಕುಲತೆಯಲ್ಲಿ ತರುತ್ತದೆ ಮತ್ತು ಈ ಒಂದು ಸ್ನೇಹ ಸದಾಕಾಲಕ್ಕೆ ಪರಿಪಕ್ವ ಮಾಡುವಂತಹುದು. ಅನೇಕ ಕಡೆಗೆ ಕತ್ತರಿಸುವುದು ಮತ್ತು ಒಂದು ಕಡೆಗೆ ಜೋಡಿಸುವುದು. ಕತ್ತರಿಸದೇ ಜೋಡಿಸಲ್ಪಡುವುದಿಲ್ಲ. ಈಗ ಕೊರತೆಗಳನ್ನು ತುಂಬಿಕೊಳ್ಳಬಹುದು. ನಂತರ ತುಂಬಿಕೊಳ್ಳುವ ಸಮಯ ಸಮಾಪ್ತಿಯಾಗುವುದು. ಈ ರೀತಿ ತಿಳಿದು ಹೆಜ್ಜೆಗಳನ್ನೂ ಮುಂದಿಡಬೇಕು.

ಎಲ್ಲರೂ ತೀವ್ರ ಪುರಷಾರ್ಥಿಗಳೋ ಅಥವಾ ಪುರುಷಾರ್ಥಿಗಳೋ? ತೀವ್ರ ಪುರುಷಾರ್ಥಿಗಳ ಮನದ ಸಂಕಲ್ಪದಲ್ಲಿಯೂ ಸೋಲಿರುವುದಿಲ್ಲ. ಸಂಕಲ್ಪದಲ್ಲಿಯೂ ಮಾಯೆಯಿಂದ ಸೋಲಾಗದಂತಹ ಸ್ಥಿತಿ ಮಾಡಿಕೊಳ್ಳಬೇಕು. ಇವರಿಗೆ ತೀವ್ರ ಪುರುಷಾರ್ಥಿ ಎಂದು ಹೇಳುತ್ತಾರೆ. ಅವರು ಶುದ್ಧ ಸಂಕಲ್ಪಗಳಲ್ಲಿ ಮೊದಲೇ ಮನಸ್ಸನ್ನು ವ್ಯಸ್ತವಾಗಿಟ್ಟುಕೊಂಡಿರುತ್ತಾರೆ. ಆದ್ದರಿಂದ ಅನ್ಯ ಸಂಕಲ್ಪಗಳು ಬರುವುದಿಲ್ಲ. ಪೂರ್ಣ ತುಂಬಿದ್ದರೆ ಒಂದು ಹನಿಯೂ ಅದರಲ್ಲಿ ಹಾಕಲು ಬರುವುದಿಲ್ಲ, ಇಲ್ಲವಾದಲ್ಲಿ ಹರಿದು ಹೋಗುವುದು. ಹಾಗಾದರೆ **ವ್ಯರ್ಥ ಸಂಕಲ್ಪಗಳು ಬರಲು ಸ್ಥಾನವೇ ಇರದಂತೆ ಇದೇ ಸಂಕಲ್ಪ ಮನದಲ್ಲಿರಲಿ, ಇಷ್ಟು ತಿಳಿದು ತಮ್ಮನ್ನು ವ್ಯಸ್ತರಾಗಿರಿಸಿಕೊಳ್ಳಿ. ಮನಸ್ಸನ್ನು ವ್ಯಸ್ತವಾಗಿರಿಸಿಕೊಳ್ಳುವ ಯಾವೆಲ್ಲ ವಿಧಿಗಳು ಸಿಗುವವೋ ಅವುಗಳನ್ನು ತಾವು ಪೂರ್ಣ ಪ್ರಯೋಗದಲ್ಲಿ ತರುವುದಿಲ್ಲ, ಆದ್ದರಿಂದ ವ್ಯರ್ಥ ಸಂಕಲ್ಪ ಬರುತ್ತವೆ. ಒಂದು ಕಡೆಗೆ ವ್ಯಸ್ತ ಮಾಡಿಕೊಳ್ಳುವದರಿಂದ, ಇನ್ನೊಂದು ಕಡೆಗೆ ತಮ್ಮನ್ನು ಬಿಡಿಸಿಕೊಳ್ಳುವಿರಿ**.

ಮಂಥನ ಮಾಡಲು ಬೇಕಾದಷ್ಟು ಖಜಾನೆಯಿದೆ. ಇದರಲ್ಲಿ ಮನಸ್ಸನ್ನು ವ್ಯಸ್ತವಾಗಿಟ್ಟುಕೊಳ್ಳಬೇಕು. ಸಮಯದ ಗತಿ ವೇಗವಾಗಿದೆಯಾ ಅಥವಾ ತಮ್ಮ ಪುರುಷಾರ್ಥದ ಗತಿ ತೀವ್ರವಾಗಿದೆಯಾ? ಒಂದು ವೇಳೆ ಸಮಯ ತೀವ್ರವಾಗಿ ಹೋಗುತ್ತಿದ್ದು ತಮ್ಮ ಪುರುಷಾರ್ಥ ನಿಧಾನವಾಗಿದ್ದರೆ ಅದರ ಫಲಿತಾಂಶ ಏನಾಗುವುದು? ಸಮಯ ಮುಂದೆ ಹೋಗುವುದು ಮತ್ತು ನೀವು ಪುರುಷಾರ್ಥಿಯಾಗಿ ಉಳಿಯುವಿರಿ, ಗಾಡಿ ಹೊರಟು ಬಿಡುವುದು. ಹತ್ತುವವರು ಉಳಿಯುವರು. ಯಾವ ಗತಿಯನ್ನು ನೋಡುತ್ತೀರಿ? ಸಮಯದಲ್ಲಿ ಮುಗಿದು ಹೋದದ್ದನ್ನು ಮುಗಿಸುವಷ್ಟು ವೇಗವಿದೆ. ಅದೇ ಮಾತನ್ನು ಸಮಯ ಮತ್ತೆ ಯಾವಾಗ ಪುನರಾವರ್ತಿಸುವುದು? ಆದ್ದರಿಂದ ಪುರುಷಾರ್ಥದಲ್ಲಿಯ ಕೊರತೆಗಳನ್ನು ಆದದ್ದು ಆಗಿ ಹೋಯಿತು. ಎಂದುಕೊಂಡು ಪ್ರತಿಕ್ಷಣ ಉನ್ನತಿಯನ್ನು ತಂದರೆ ಸಮಯದಂತೆ ವೇಗವಾಗಿ ಹೋಗಬಹುದು. ಸಮಯ ರಚನೆಯಾಗಿದೆಯಲ್ಲವೇ? ರಚನೆಯಲ್ಲಿ ಈ ಗುಣವಿದೆಯಾದರೆ ರಚಯಿತನಲ್ಲಿಯೂ ಇರಬೇಕು, ನಾಟಕ ರಚನೆಯಾದರೆ ರಚಯಿತನ ಮಕ್ಕಳು ತಾವಾಗಿದ್ದೀರಲ್ಲವೇ? ಹಾಗಾದರೆ ರಚಯಿತನ ಮಕ್ಕಳು ರಚನೆಗಿಂತ ಸಾಧಾರಣವೇಕೆ? ಆದ್ದರಿಂದ ಹೇಗೆ ಡ್ರಾಮಾದಲ್ಲಿ ಪ್ರತಿ ಸೆಕೆಂಡು ಅಥವಾ ಕಳೆದದ್ದು ಕಳೆದು ಹೋಯಿತು, ಯಾವ ರೂಪದಲ್ಲಿ ಕಳೆದುಹೋಯಿತು ಅದು ಮತ್ತೆ ಪುನರಾವರ್ತನೆ ಆಗುವುದಿಲ್ಲ ಮತ್ತೆ 5000 ವರ್ಷಗಳ ನಂತರ ಪುನರಾವರ್ತನೆಯಾಗುವುದು. ಎಂಬ ಒಂದು ಮಾತಿನ ಬಗೆಗೆ ಗಮನವಿರಲಿ, ಹಾಗಾದರೆ ದುರ್ಬಲತೆಗಳನ್ನು ಬಾರಿಬಾರಿ ಏಕೆ ಪುನರಾವರ್ತಿಸುವಿರಿ? ದುರ್ಬಲತೆಗಳನ್ನು ಪುನರಾವರ್ತಿಸದಿದ್ದರೆ ಪುರುಷಾರ್ಥ ವೇಗವಾಗುವುದು. ದುರ್ಬಲತೆಗಳನ್ನು ಅಳವಡಿಸಿಕೊಳ್ಳದಿದ್ದಾಗ ದುರ್ಬಲತೆಗಳ ಜಾಗದಲ್ಲಿ ಶಕ್ತಿ ತುಂಬುತ್ತದೆ. ಒಂದು ವೇಳೆ ದುರ್ಬಲತೆಗಳು ಪುನರಾವರ್ತಿಸುತ್ತಿದ್ದರೆ ಶಕ್ತಿ ತುಂಬುವುದಿಲ್ಲ. ಆದ್ದರಿಂದ ಆದದ್ದು ಆಗಿ ಹೋಯಿತು, ದುರ್ಬಲತೆಯ ಗತಿಸಿ ಹೋದ ಮಾತುಗಳು ಸಂಕಲ್ಪದಲ್ಲಿಯೂ ಬರಬಾರದು. ಒಂದು ವೇಳೆ ಸಂಕಲ್ಪ ನಡೆಯುತ್ತಿದ್ದರೆ ವಾಣಿ ಮತ್ತು ಕರ್ಮದಲ್ಲಿ ಬರುತ್ತವೆ. ಸಂಕಲ್ಪದಲ್ಲಿಯೇ ನಾಶ ಮಾಡಿದರೆ ವಾಣಿ ಮತ್ತು ಕರ್ಮದಲ್ಲಿ ಬರುವುದಿಲ್ಲ. ನಂತರ ಮನ, ವಾಣಿ, ಕರ್ಮ ಮೂರು ಶಕ್ತಿಶಾಲಿ ಆಗುವವು. ಕೆಟ್ಟ ವಸ್ತುವನ್ನು ಸದಾ ಕೂಡಲೇ ಬಿಸಾಕಲಾಗುತ್ತದೆ ಮತ್ತು ಒಳ್ಳೆಯ ವಸ್ತುವನ್ನು ಉಪಯೋಗಿಸಿಕೊಳ್ಳಲಾಗುತ್ತದೆ. ಕೆಟ್ಟ ವಸ್ತುಗಳನ್ನು ಬಿಸಾಕುವಂತೆ ಕೆಟ್ಟ ಮಾತುಗಳನ್ನು ಬಿಸಾಕಿರಿ. ಆಗ ಸಮಯ, ಪುರುಷಾರ್ಥಕ್ಕಿಂತ ತೀವ್ರ ಗತಿಯಿಂದ ಹೋಗುವುದಿಲ್ಲ. "ನಾವು ತಯಾರಾಗಿದ್ದೇವೆ, ಸಮಯ ಬಂದಾಗ ನಾವು ಹೋಗುವೆವು". ಈ ಸ್ಥಿತಿಯಾಗುವುದು. ಒಂದು ವೇಳೆ ತಮ್ಮ ತಯಾರಿ ಇರದಿದ್ದರೆ ನಮಗಾಗಿ ಸಮಯ ಸ್ವಲ್ಪ ನಿಲ್ಲಲಿ ಎಂದು ಯೋಚಿಸಲಾಗುತ್ತದೆ.

ಬಂಧನದಲ್ಲಿರುವವರ ಯೋಗ ತೀವ್ರವಾಗಿರುತ್ತದೆ ಏಕೆಂದರೆ ಯಾವ ಮಾತಿನಲ್ಲಿ ತಡೆಯಲ್ಪಡುತ್ತಾರೆಯೋ ಅತ್ತ ಕಡೆಗೆ ಅವಶ್ಯವಾಗಿ ಬುದ್ಧಿ ಜಾಸ್ತಿ ಹೋಗುತ್ತದೆ. ಮನೆಯಲ್ಲಿ ಕುಳಿತೇ ಚರಿತ್ರೆಗಳ ಅನುಭವ ಮಾಡಬಹುದು. ಆದರೆ ಇಂತಹ ಸಂಲಗ್ನತೆಯಿರಬೇಕು. ಯಾವಾಗ ಈ ರೀತಿಯ ಸಂಲಗ್ನತೆಯ ಸ್ಥಿತಿಯಾಗುವುದೋ ಆಗ ಬಂಧನ ಕತ್ತರಿಸಲ್ಪಡುವುದು. ಒಬ್ಬರ ನೆನಪೇ ಅನೇಕ ಬಂಧನವನ್ನು ಕತ್ತರಿಸುವಂತಹುದು. ಒಬ್ಬನ ಜೊತೆಗೆ ಜೋಡಿಸುವುದು, ಅನೇಕರ ಜೊತೆಗೆ ಕತ್ತರಿಸುವುದು. ಒಬ್ಬ

ತಂದೆಯ ಹೊರತು ಬೇರೆ ಯಾರೂ ಇಲ್ಲ. ಇಂತಹ ಸ್ಥಿತಿಯಾದಾಗ ಈ ಬಂಧನ ಮುಂತಾದವು ಸಮಾಪ್ತಿಯಾಗುವವು. ಎಷ್ಟು ಖಂಡಿಸದಂತಹ ಸ್ನೇಹವಿರುವುದೋ ಅಷ್ಟು ಖಂಡಿಸದ ಸಹಯೋಗ ಸಿಗುವುದು. ಸಹಯೋಗ ಸಿಗದೇ ಇರಲು ಕಾರಣ ಸ್ನೇಹದ ಕೊರತೆಯಾಗಿದೆ. ಅಖಂಡ ಸ್ನೇಹವನ್ನಿಟ್ಟುಕೊಂಡು ಅಖಂಡ ಸಹಯೋಗ ಪ್ರಾಪ್ತಿ ಮಾಡಿಕೊಳ್ಳಬೇಕು, ಕಲ್ಪದ ಹಿಂದಿನ ತಮ್ಮ ಅಧಿಕಾರವನ್ನು ಪಡೆಯಲು ಮತ್ತೆ ಬಂದಿದ್ದೀರಿ ಎಂದು ತಿಳಿಯುತ್ತೀರಾ? ನಾವೇ ಕಲ್ಪದ ಮೊದಲಿನವರು ಎಂಬ ಸ್ಮೃತಿ ಬರುತ್ತದೆಯೇ? ಈಗಲೂ ಮತ್ತೊಮ್ಮೆ ನಾವೇ ನಿಮಿತ್ತರಾಗುವೆವು. ಯಾರಿಗೆ ಈ ನಶೆಯಿರುತ್ತದೆಯೋ ಅವರ ಮುಖದಲ್ಲಿ ಖುಷಿ ಮತ್ತು ಜ್ಯೋತಿ ರೂಪ ಕಂಡು ಬರುತ್ತದೆ. ಅವರ ಮುಖದಲ್ಲಿ ಅಲೌಕಿಕ ಅವ್ಯಕ್ತ ಹೊಳಪು(ಕಾಂತಿ) ಇರುತ್ತದೆ. ಅವರ ಕಣ್ಣುಗಳಿಂದ, ಮುಖದಿಂದ ಸದಾ ಖುಷಿಯೇ ನೋಡುವಿರಿ. ನೋಡುವವರೂ ಸಹ ತಮ್ಮ ದುಃಖವನ್ನು ಮರೆಯುವರು. ದುಃಖಿ ಆತ್ಮ ತನ್ನ ಖುಷಿಗಾಗಿ ಯಾವುದಾದರೂ ಖುಷಿಯ ಸಾಧನವನ್ನು ಮಾಡಿಕೊಳ್ಳುವಂತೆ ಖುಷಿಯ ದರ್ಪಣದಲ್ಲಿ ಮುಖ ಕಂಡುಬರಬೇಕು. ತಮ್ಮ ಮುಖದಿಂದ ಸೇವೆಯಾಗಬೇಕು, ಹೇಳದಿದ್ದರೂ ತಮ್ಮ ಮುಖ ಸೇವೆ ಮಾಡಬೇಕು. ಇತ್ತೀಚೆಗೆ ಜಗತ್ತಿನಲ್ಲಿ ತಮ್ಮ ಮುಖಗಳನ್ನೇ ಶೃಂಗಾರ ಮಾಡಿಕೊಳ್ಳುತ್ತಾರಲ್ಲವೇ? ಅದೇ ರೀತಿ ತಮ್ಮೆಲ್ಲರ ಶೃಂಗರಿಸಲ್ಪಟ್ಟ ಮುಖಗಳು ಕಂಡುಬರಬೇಕು. ಸರ್ವಶಕ್ತಿವಂತನ ಮಕ್ಕಳಿಗೆ ಶಕ್ತಿ ಇಲ್ಲವೆಂದರೆ ಹೇಗೆ ಸಾಧ್ಯ? ಅವಶ್ಯ ಬುದ್ಧಿಯ ಜೋಡಣೆಯಲ್ಲಿ ಕೊರತೆಯಿದೆ. ತಂತಿಗಳನ್ನು ಜೋಡಿಸಲು ಸಿಗುವ ಯುಕ್ತಿಗಳನ್ನು ಅಭ್ಯಾಸದಲ್ಲಿ ತನ್ನಿ, ಕತ್ತರಿಸದೆಯೇ ಜೋಡಿಸುತ್ತೀರಿ ಆದ್ದರಿಂದ ಪೂರ್ಣ ಜೋಡಿಸಲ್ಪಡುವುದಿಲ್ಲ. ಆದ್ದರಿಂದ ಅನೇಕ ಕಡೆಗೆ ಕತ್ತರಿಸಿ ಒಂದು ಕಡೆಗೆ ಜೋಡಿಸಬೇಕು. ಇದಕ್ಕಾಗಿ ಸಂಗವೂ ಬೇಕು ಮತ್ತು ಗಮನವೂ ಬೇಕು. ಪ್ರತಿಯೊಂದು ಹೆಜ್ಜೆಯಲ್ಲಿ, ಸಂಕಲ್ಪದಲ್ಲಿಯೂ ಎಚ್ಚರಿಕೆಯಿರಲಿ, ಪ್ರತಿ ಸಂಕಲ್ಪ ಯಥಾರ್ಥವಾಗಿದೆಯಾ ಎಂದು ಪರಿಶೀಲನೆ ಮಾಡಿಕೊಳ್ಳಿ. ಆಗ ವಾಣಿಯೂ, ಕರ್ಮವೂ ಸರಿಯಾಗಿರುವುದು. ಸಂಕಲ್ಪ ಮತ್ತು ಸಮಯ ಎರಡೂ ಸಂಗಮಯುಗದ ವಿಶೇಷ ಖಜಾನೆಯಾಗಿರುವುದರಿಂದ ಬಹಳ ಸಂಪಾದನೆ ಮಾಡಬಹುದು. ಹೇಗೆ ಸ್ಥೂಲ ಧನವನ್ನು ವ್ಯರ್ಥವಾಗಬಾರದೆಂದು ಯೋಚಿಸಿ ಉಪಯೋಗಮಾಡುತ್ತೀರೋ ಅದೇ ರೀತಿ ಸಂಗಮದ ಸಮಯ ಮತ್ತು ಸಂಕಲ್ಪ ವ್ಯರ್ಥವಾಗಿ ಹೋಗಬಾರದು. **ಒಂದು ವೇಳೆ ಸಂಕಲ್ಪ ಶಕ್ತಿಶಾಲಿಯಾಗಿದ್ದರೆ ತಮ್ಮದೇ ಸಂಕಲ್ಪದ ಆಧಾರದ ಮೇಲೆ ತಮಗಾಗಿ ಸತ್ಯಯುಗದ ಸೃಷ್ಟಿಯನ್ನು ತರುವಿರಿ ತಮ್ಮ ಸಂಕಲ್ಪ ದುರ್ಬಲವಾಗಿದ್ದರೆ ತಮಗಾಗಿ ತ್ರೇತಾಯುಗದ ಸೃಷ್ಟಿಯನ್ನು ತರುವಿರಿ.** ಈ ಖಜಾನೆ ಇಡೀ ಕಲ್ಪದಲ್ಲಿ ಸಿಗುವುದಿಲ್ಲ, ಹಾಗಾದರೆ ಕಷ್ಟದಿಂದ ಒಂದೇ ಬಾರಿಗೆ ಸಿಗುವ ವಸ್ತುವಿಗೆ ಎಷ್ಟು ಬೆಲೆ ಕೊಡಬೇಕು. ಈಗ ಏನಾಗುವುದೋ ಅದೇ ಸತ್ಯ. ನಂತರ ಆದದ್ದನ್ನು ನೋಡುತ್ತಿರಬೇಕು. ಪುರುಷಾರ್ಥ ಮಾಡಲಾಗುವುದಿಲ್ಲ, ಈಗಲೇ ಭಾಗ್ಯವನ್ನು ಮಾಡಿಕೊಳ್ಳಬಹುದು. ಅದಕ್ಕಾಗಿ ಈಗ ಸ್ವಲ್ಪ ಸಮಯವಿದೆ. ಬಹಳ ಕಳೆಯಿತು ಸ್ವಲ್ಪ ಉಳಿಯಿತು ಎಂದು ಬೇರೆಯವರಿಗೆ ಹೇಳುತ್ತೀರಿ, ಆದರೆ ಅದನ್ನು ತಮಗೆ ಅನ್ವಯಿಸಿಕೊಳ್ಳುತ್ತೀರಾ? ಸಮಯ ಬಹಳ ಕಡಿಮೆಯಿದೆ ಆದರೆ ಕೆಲಸ ಜಾಸ್ತಿ ಮಾಡಬೇಕಾಗಿದೆ. ಇಂದಿನಿಂದ ಮತ್ತೆ ಈ ಮಾತುಗಳು ಎಂದೂ ಇರುವುದಿಲ್ಲವೆಂದು ತಮಗೆ ತಾವೇ ಧೃಡ ಪ್ರತಿಜ್ಞೆ ಮಾಡಿ, ಈ ಸಂಸ್ಕಾರ ತಮ್ಮಲ್ಲಿ ಮತ್ತೆ ಪ್ರಕಟವಾಗಲು ಬಿಡುವುದಿಲ್ಲವೆಂದು ಧೃಡ ಪ್ರತಿಜ್ಞೆ ಮಾಡಿದಾಗ ಪ್ರತ್ಯಕ್ಷ ಫಲ ಸಿಗುವುದು. ಇನ್ನು ದಿನಗಳು ಬದಲಾವಣೆಯಾಗುವವು, ಆದ್ದರಿಂದ ಸ್ವಯಂ ಬದಲಾಗಬೇಕು. ಈಗ ಸಾಧಾರಣ ಪುರುಷಾರ್ಥದ ದಿನಗಳು ಮುಗಿದವು, ಈಗ ತೀವ್ರ ಪುರುಷಾರ್ಥದ ಸಮಯ, ತೀವ್ರ ಪುರುಷಾರ್ಥದ ಸಮಯ ಯಾರಾದರೂ ಸಾಧಾರಣ ಪುರುಷಾರ್ಥ ಮಾಡಿದರೆ ಏನೆನ್ನುವರು? ಆದ್ದರಿಂದ ಈಗ ಸ್ವಲ್ಪ ಪ್ರಜ್ಞಾವಂತರಾಗಿ, ಬಾರಿಬಾರಿ ಪ್ರಜ್ಞಾಹೀನರಾಗಬೇಡಿ, ಸಂಜೀವಿನಿ ಮೂಲಿಕೆಯನ್ನು ಜೊತೆಗಿಟ್ಟುಕೊಂಡು ಸದಾ ಪ್ರಜ್ಞೆಯಲ್ಲಿರಿ. ಹಾಂ ಮಾಡುತ್ತೇವೆ, ಆಗುವುದು, ನೋಡುತ್ತೇವೆ ಈ ಶಬ್ದಗಳು ಇನ್ನು ಬರದಿರಲಿ, ಇಂತಹ ಮಾತುಗಳನ್ನು ಬಹಳ ಸಮಯ ಕೇಳಿದೆವು. ಈಗ ಬಾಪ್ ದಾದಾ "ಬಾಬಾ, ಆಗಲಿ ನಾವು ಮಾಡಿ ತೋರಿಸುತ್ತೇವೆ" ಎಂಬ ಮಾತುಗಳನ್ನು ಕೇಳ ಬಯಸುತ್ತಾರೆ.

ತಮ್ಮ ನಡತೆಯಲ್ಲಿ ಅಲೌಕಿಕತೆಯನ್ನು ತನ್ನಿ, ಆಗ ನಡತೆಯಲ್ಲಿನ ಆಕರ್ಷಣೆ ಸಂಬಂಧಿಗಳನ್ನು ಆಕರ್ಷಿಸುವುದು. ಲೌಕಿಕ ಸಂಬಂಧಗಳಲ್ಲಿ ಶಬ್ದಗಳು ಕೆಲಸ ಮಾಡುವುದಿಲ್ಲ. ನಡತೆಯ ಆಕರ್ಷಣೆಯಿರುತ್ತದೆ. ಆದ್ದರಿಂದ ಈಗ ಬಹಳ ತೀವ್ರಗತಿಯಿಂದ ಹೋಗಬೇಕು. ಎಲ್ಲರಿಗೂ ಉದಾಹರಣೆಯಾಗುವಂತಹ ರೀತಿಯಲ್ಲಿ ಬದಲಾವಣೆಯನ್ನು ತಂದು ತೋರಿಸಿ. ಈಗ

ಒಂದು ಕ್ಷಣವನ್ನು ಸಹ ವ್ಯರ್ಥ ಕಳೆಯಬೇಡಿ. ತಾವು ಪರಿಶೀಲನೆ ಮಾಡಿಕೊಳ್ಳಬಹುದು. ಸಮಯ ಬಹಳ ಕಡಿಮೆ ಉಳಿದಿದೆ. ಸಮಯವೂ ಬೇಹದ್ದಿನ ವೈರಾಗ್ಯ ವೃತ್ತಿಯನ್ನು ಉತ್ಪನ್ನ ಮಾಡುತ್ತದೆ. ಆದರೆ ಸಮಯದ ಮೊದಲೇ ತಮ್ಮ ಪರಿಶ್ರಮದಿಂದ ಮಾಡಿದಾಗ ಅದರ ಫಲವೂ ಹೆಚ್ಚು ದೊರೆಯುತ್ತದೆ. ಆದರೆ ಯಾರು ತಾವಾಗಿ ಮಾಡುವುದಿಲ್ಲವೋ ಅವರಿಗಾಗಿ ಸಮಯ ಸಹಾಯ ಮಾಡುವುದು ಆದರೆ ಅದು ಸಮಯದ ಬಲಿಹಾರವಾಗುತ್ತದೆ ತಮ್ಮ ಬಲಿಹಾರವಾಗುವುದಿಲ್ಲ. ಎಷ್ಟು ಬಾರಿ ಬಾಪ್ ದಾದಾರನ್ನು ಮಿಲನ ಮಾಡಿದ್ದೀರಿ? ಅನೇಕ ಬಾರಿ ಈ ಜನ್ಮಸಿದ್ಧ ಅಧಿಕಾರ ಸಿಕ್ಕಿದೆ ಎಂಬುದು ಸ್ಮೃತಿಯಲ್ಲಿದೆಯೇ? ಎಷ್ಟು ದೊಡ್ಡ ಅಧಿಕಾರವಾಗಿದೆ. ಯಾವುದೇ ಪ್ರಯತ್ನಗಳಿಂದಲೂ ಪ್ರಾಪ್ತಿಯಾಗುವುದಿಲ್ಲ, ಇದು ಸಹಜ ಪ್ರಾಪ್ತಿಯಲ್ಲ ಈ ರೀತಿ ಅನುಭವ ಮಾಡಿರುವಿರಾ ? ಇನ್ನೂ ಎಷ್ಟು ಸಮಯ ಬಾಕಿ ಉಳಿದಿದೆ ಮತ್ತು ಪುರುಷಾರ್ಥ ಎಷ್ಟು ಮಾಡಿರುವಿರಿ ಎಂದು ಇವೆರಡರ ಪರಿಶೀಲನೆಯಿದೆಯೇ? ಸಮಯ ಕಡಿಮೆಯಿದೆ ಮತ್ತು ಪುರುಷಾರ್ಥ ಬಹಳ ಮಾಡಬೇಕು. ಯಾವುದೇ ವಿದ್ಯಾರ್ಥಿ ಅಂತಿಮ ಸಮಯದಲ್ಲಿ ಬಂದು ದಾಖಲಾದರೆ ಸ್ವಲ್ಪ ಸಮಯದಲ್ಲಿ ಎಷ್ಟು ಪರಿಶ್ರಮ ಪಡುತ್ತಾನೆ. ಸಮಯ ಎಷ್ಟು ತೀವ್ರವಾಗಿ ಹೋಗುತ್ತಿದೆಯೋ ಅಷ್ಟು ತೀವ್ರವಾದ ಪುರುಷಾರ್ಥವಿದೆಯೇ? "ಯಾವಾಗ" ಎಂಬ ಶಬ್ದವನ್ನು ತೆಗೆದು ಹಾಕಬೇಕು. ತೀವ್ರ ಪುರುಷಾರ್ಥಿಗಳು ಯಾವಾಗಲಾದರೂ ಎಂಬ ಶಬ್ದವನ್ನು ಹೇಳುವುದಿಲ್ಲ, ಈಗ ಮಾಡುವೆವು ಎನ್ನುವರು. ಈ ಸಂಗಮ ಸಮಯದ ಒಂದು ಕ್ಷಣವೂ ಎಷ್ಟು ಅಮೂಲ್ಯವಾಗಿದೆ. ಒಂದು ಕ್ಷಣ ವ್ಯರ್ಥವಾಗಿ ಕಳೆದರೂ ಎಷ್ಟು ಸಂಪಾದನೆ ವ್ಯರ್ಥವಾಗಿ ಹೋಗುವುದು. ಪೂರ್ಣ ಕಲ್ಪದ ಭಾಗ್ಯವನ್ನು ಮಾಡಿಕೊಳ್ಳಲು ಈಗ ಸ್ವಲ್ಪ ಸಮಯವಿದೆ. ಒಂದು ಕ್ಷಣದಲ್ಲಿ ಪದಮದಷ್ಟು ಸಂಪಾದನೆ ಮಾಡಿಕೊಳ್ಳುವವರೂ ಇದ್ದಾರೆ ಮತ್ತು ಒಂದು ಕ್ಷಣದಲ್ಲಿ ಪದಮದಷ್ಟು ಕಳೆದುಕೊಳ್ಳುವವರೂ ಇದ್ದಾರೆ. ಇಂತಹ ಸಮಯವನ್ನು ಪರಿಶೀಲಿಸಿ ಮತ್ತೆ ಹೆಜ್ಜೆಗಳನ್ನು ತೀವ್ರವಾಗಿರಿಸಿರಿ. ಸಮಸ್ಯೆಗಳಂತೂ ಆಗುತ್ತಲೇ ಇರುತ್ತವೆ. ಪರಿಸ್ಥಿತಿಗಳು ಸ್ಥಿತಿಯಿಂದ ಬದಲಾಗುವಷ್ಟು ಸ್ಥಿತಿ ಶಕ್ತಿಶಾಲಿಯಾಗಿರಬೇಕು. ಪರಿಸ್ಥಿತಿಯ ಆಧಾರದ ಮೇಲೆ ಸ್ಥಿತಿ ಬೇಡ, ಸ್ಥಿತಿ ಪರಿಸ್ಥಿತಿಯನ್ನು ಬದಲಾಯಿಸುವುದು ಏಕೆಂದರೆ ಸರ್ವಶಕ್ತಿವಂತನ ಸಂತಾನರಾಗಿದ್ದೀರಿ ಎಂದರೆ ಈಶ್ವರೀಯ ಶಕ್ತಿ ಪರಿಸ್ಥಿತಿಯನ್ನು ಬದಲಾಯಿಸುವುದಿಲ್ಲವೇ? ರಚಯಿತನ ಮಕ್ಕಳು ರಚನೆಯನ್ನು ಬದಲಾಯಿಸಲಾರರೇ? ರಚನೆ ಶಕ್ತಿಶಾಲಿಯಾಗಿರುತ್ತದೆಯೋ ಅಥವಾ ರಚಯಿತನೋ? ರಚಯಿತನ ಮಕ್ಕಳು ರಚನೆಯ ಅಧೀನ ಹೇಗೆ ಆಗುವರು? ಅಧಿಕಾರವಿಟ್ಟುಕೊಳ್ಳಬೇಕೇ ಹೊರತು ಅಧೀನರಾಗಬಾರದು. ಎಷ್ಟು ಅಧಿಕಾರವಿಟ್ಟುಕೊಳ್ಳುವಿರೋ ಅಷ್ಟು ಪರಿಸ್ಥಿತಿಗಳು ಬದಲಾಗುವವು. ಅವುಗಳ ಬೆನ್ನು ಹತ್ತಿದಾಗ ಮತ್ತಷ್ಟು ಎದುರಿಸಬೇಕಾಗುತ್ತದೆ. ಪರಿಸ್ಥಿತಿಗಳ ಬೆನ್ನು ಹತ್ತುವುದು ಎಂದರೆ ತಮ್ಮ ನೆರಳನ್ನು ಹಿಡಿಯಲು ಪ್ರಯತ್ನ ಮಾಡಿದಂತೆ. ಆದರೆ ಸಿಗುವುದೇ? ಇನ್ನೂ ಮುಂದಕ್ಕೆ ಹೋಗುತ್ತದೆಯಾದರೆ ಅದನ್ನು ಬಿಟ್ಟು ಬಿಡಬೇಕು. ವಾಯುಮಂಡಲವನ್ನು ಬದಲಾಯಿಸುವುದು ಬಹಳ ಸಹಜವಾಗಿದೆ. ಇಷ್ಟು ಸಣ್ಣ ಅಗರಬತ್ತಿ, ಸುಂಗಧದ ಸಣ್ಣ ವಸ್ತುವು ವಾಯುಮಂಡಲವನ್ನು ಬದಲಾಯಿಸುತ್ತದೆ. ಹಾಗಾದರೆ ಜ್ಞಾನದ ಶಕ್ತಿಯಿಂದ ವಾಯುಮಂಡಲವನ್ನು ಬದಲಾಯಿಸಲಾರಿರಾ? ವಾಯುಮಂಡಲವನ್ನು ಸದಾ ಶುದ್ಧವಾಗಿಟ್ಟುಕೊಳ್ಳಬೇಕು. ಜನ ಏನಾದರೂ ಹೇಳಲಿ, ಯಾವ ಮಾತಿನಲ್ಲಿ ಆಸಕ್ತಿಯಿಲ್ಲವೋ ಆ ಮಾತನ್ನು ಕೇಳುತ್ತಿದ್ದರೂ ಕೇಳದಿರುವಂತೆ, ತನು ಅಲ್ಲಿದೆ, ಆದರೆ ಮನಸ್ಸು ಅಲ್ಲಿಲ್ಲ. ಈ ರೀತಿ ಅನೇಕ ಬಾರಿ ಆಗುತ್ತದೆ. ಮನಸ್ಸು ಒಂದು ಕಡೆಗೆ ಇರುತ್ತದೆ ಮತ್ತು ಅಲ್ಲಿ ಕುಳಿತಿದ್ದರೂ ಕುಳಿತಿಲ್ಲದಂತೆ, ತನುವಿನಿಂದ ಜೊತೆ ಕೊಡಬೇಕಾಗುತ್ತದೆ ಆದರೆ ಮನದಿಂದ ಅಲ್ಲ ಆದ್ದರಿಂದ ಕೇವಲ ಗಮನಿಸಿ, ಎಲ್ಲಿಯವರೆಗೆ ಸಾಹಸವಿಟ್ಟು ಹೆಜ್ಜೆ ಇಡುವುದಿಲ್ಲವೋ ಅಲ್ಲಿಯವರೆಗೆ ಉನ್ನತವಾದ ಗುರಿ ಸಿಗುವುದಿಲ್ಲ. ಹೆಜ್ಜೆ ಇಟ್ಟರೆ ಮತ್ತೆ ಲಿಫ್ಟನಂತೆ ತಕ್ಷಣ ತಲುಪುವಿರಿ, ಸಾಹಸವಿಟ್ಟುಕೊಳ್ಳಿ, ಏರುವುದು ಲಿಫ್ಟ್ ಆಗುವುದು, ಹಾಗಾದರೆ ಸಾಹಸದ ಹೆಜ್ಜೆಯಿಡಿ, ಮಾಡಬಲ್ಲಿರಿ, ಕೇವಲ ಲೋಕ ಮರ್ಯಾದೆಯ ತ್ಯಾಗ ಮತ್ತು ಸಾಹಸದ ಧಾರಣೆ ಬೇಕು. ಪರಸ್ಪರರ ಸಹಯೋಗವೇ ದೊಡ್ಡ ಲಿಫ್ಟ ಆಗಿದೆ. ಪರಿಸ್ಥಿತಿಗಳು ಬರುವವು ಆದರೆ ತಮ್ಮ ಸ್ಥಿತಿ ಶಕ್ತಿಶಾಲಿಯಾಗಿರಬೇಕು. ನಂತರ ಹೇಗೆ ಸಮಯವೋ ಹಾಗೆ ವಿಧಿಯೂ (touch ಆಗುವುದು) ತಿಳಿಯುವುದು, ಸಮಯಕ್ಕೆ ಅನುಸಾರವಾಗಿ ಯುಕ್ತಿ ಗೊತ್ತಾಗದಿದ್ದರೆ ಆಗ ಯೋಗಬಲವಿಲ್ಲವೆಂದು ತಿಳಿಯಬೇಕು, ಯೋಗಯುಕ್ತರಾಗಿದ್ದರೆ ಸಹಯೋಗ ಅವಶ್ಯವಾಗಿ ಸಿಗುವುದು, ಯಾರು ಯಥಾರ್ಥ ಪುರುಷಾರ್ಥಿಗಳಾಗಿ ಇರುವರೋ ಅವರ ಪುರುಷಾರ್ಥದಲ್ಲಿ ಇಷ್ಟು ಶಕ್ತಿ ಇರುತ್ತದೆ. ಹೆಚ್ಚು

ಯೋಚಿಸಬಾರದು. ಅನೇಕ ಕಡೆಗೆ ಸೆಳೆತವಿದ್ದರೆ ಮಾಯೆಯ ಅಗ್ನಿಯು ತಾಕುತ್ತದೆ. ಕರ್ತವ್ಯ ನಿಭಾಯಿಸಬೇಕು ಆದರೆ ಸೆಳೆತ ಇರಬಾರದು. ಬೇರೆಯವರಿಗೆ ಉದಾಹರಣೆಯಾಗುವಂತೆ ಶಕ್ತಿಶಾಲಿಯಾಗಿರಬೇಕು. ಉದಾಹರಣೆಯಾಗುವವರು ಪರೀಕ್ಷೆಯಲ್ಲಿ ಪಾಸಾಗುತ್ತಾರೆ. ಪರೀಕ್ಷೆ ಕೊಡಲು, ಇವರು ಹೇಗೆ ನವೀನತೆಯಲ್ಲಿ ಬಂದರೆಂಬ ಉದಾಹರಣೆಯಾಗಿ ಎಲ್ಲರೂ ನೋಡುವಂತೆ ತೋರಿಸಿ. ತಮ್ಮನ್ನು ನೋಡಿ ಅನ್ಯರಿಗೆ ಪ್ರೇರಣೆ ಸಿಗುವಂತೆ ಸೇವಾಧಾರಿಗಳಾಗಿ, ಮೊದಲು ಬಂದಂತಹ ಶಕ್ತಿಯರು ಇಷ್ಟೊಂದು ಶಕ್ತಿಯರನ್ನು ತಯಾರು ಮಾಡಿದರು. ತಾವು ಈಗ ಸೃಷ್ಟಿಯನ್ನು ಬದಲಿಸಿ ಮುಂದೆ ಹೋಗಬೇಕು. ನಾವು ಶಕ್ತಿಯರು ಜಗತ್ತನ್ನು ಬದಲಿಸುವೆವು ಎಂದು ಗೀತೆಯೂ ಇದೆಯಲ್ಲವೇ ಸೃಷ್ಟಿಯನ್ನು ಯಾರು ಬದಲಿಸುವರು? ಯಾರು ಮೊದಲು ತಮ್ಮನ್ನು ಬದಲಿಸಿಕೊಳ್ಳುವರೋ ಅವರು. ಶಕ್ತಿಯರ ಸವಾರಿ ಸಿಂಹದ ಮೇಲೆ ತೋರಿಸುತ್ತಾರೆ. ಯಾವ ಸಿಂಹ? ಸಿಂಹದ ರೂಪದಲ್ಲಿ ಆಕ್ರಮಣ ಮಾಡಲು ಬರುವ ಈ ಮಾಯೆಯನ್ನು ತಮ್ಮ ಅಧೀನ ಮಾಡಿಕೊಂಡು ಸವಾರಿ ಮಾಡಿ ಎಂದರೆ ಅದರ ಶಕ್ತಿಯನ್ನು ನಾಶ ಮಾಡಿ. ಸಿಂಹದ ಮೇಲೆ ಸವಾರಿ ಮಾಡಿರುವ ಇಂತಹ ಶಕ್ತಿಯರೇ ನೀವು. ಎಲ್ಲರದೂ ಆ ಚಿತ್ರವಿದೆ. ಇಂತಹ ಸಿಂಹಿಣಿ ಶಕ್ತಿಯರು ಎಂದಿಗೂ ಮಾಯೆಗೆ ಹೆದರುವುದಿಲ್ಲ. ಆದರೆ ಮಾಯೆ ಅವರಿಗೆ ಹೆದರುತ್ತದೆ. ರೀತಿ ಶಕ್ತಿ ಇಲ್ಲದೆಯೇ ಬಂಧನ ಕತ್ತರಿಸಲಾರದು. ನೆನಪಿನ ಶಕ್ತಿಯಾಗಿದೆ - ಒಬ್ಬ ತಂದೆಯ ಹೊರತು ಇನ್ನಾರೂ ಇಲ್ಲ. ಇಂತಹ ಸೌಭಾಗ್ಯ ಕೋಟಿಯಲ್ಲಿ ಕೆಲವರಿಗೆ ಸಿಗುತ್ತದೆ. ಇಷ್ಟು ಪದಮಾ ಪದಮ್ ಭಾಗ್ಯಶಾಲಿ ಎಂದು ತಮ್ಮನ್ನು ತಿಳಿದುಕೊಳ್ಳುತ್ತೀರಾ? ಶಕ್ತಿದಳ ಬಹಳ ಅದ್ಭುತವನ್ನು ಮಾಡಬಲ್ಲದು. ಕಠಿಣ ಪರಿಶ್ರಮ ಪಡುವವರಿಗೆ ತಂದೆಯೂ ಸಹಾಯ ಮಾಡುತ್ತಾರೆ. ಸ್ನೇಹಿಯಾಗಿರುವವರಿಗೆ ತಂದೆಯೂ ಸ್ನೇಹಿಯಾಗಿರುತ್ತಾರೆ. ಅಂತಹ ಮಕ್ಕಳೇ ತಂದೆಯ ಸಮ್ಮುಖದಲ್ಲಿರುತ್ತಾರೆ. ಭಲೇ ಯಾರು ಎಷ್ಟೇ ದೂರದಲ್ಲಿರಲಿ ಆದರೆ ಬಾಪ್ ದಾದಾರ ಹೃದಯಕ್ಕೆ ಸಮೀಪವಾಗಿದ್ದಾರೆ. ಎಲ್ಲಕ್ಕಿಂತ ಒಳ್ಳೆಯ ಉಡುಗೊರೆಯಾಗಿದೆ ತಮ್ಮ ಈ ಮುಖವನ್ನು ಸದಾ ಹರ್ಷಿತವಾಗಿ ಇಟ್ಟುಕೊಳ್ಳುವುದು. ಎಂದಿಗೂ ಯಾವುದೇ ವ್ಯಾಕುಲತೆಯ ರೇಖೆಗಳು ಇರದಿರಲಿ, ಸಂಪೂರ್ಣ ಚಂದ್ರ ಎಷ್ಟು ಸುಂದರವಾಗಿ ಕಾಣುತ್ತಾನೆಯೋ ಹಾಗೆಯೇ ತಮ್ಮ ಮುಖ ಸದಾ ಹರ್ಷಿತವಾಗಿರಲಿ, ಬೇರೆಯವರು ತಮ್ಮ ರೂಪವನ್ನು ಹೊಳೆಯುತ್ತಿರುವ ತಮ್ಮ ಮುಖದಲ್ಲಿ ನೋಡಿಕೊಳ್ಳುವಂತೆ ಇರಲಿ. ಮುಖ ದರ್ಪಣವಾಗಲಿ, ಅನೇಕ ಆತ್ಮರಿಗೆ ಅವರ ಮುಖಗಳನ್ನು ತೋರಿಸಬೇಕು. ಈಗ ಪದಮಾ ಪದಮ್ ಭಾಗ್ಯಶಾಲಿಯಾಗಬೇಕು. ಮಹಾದಾನಿಯಾಗಬೇಕು. ದಯಾ ಹೃದಯಿ ತಂದೆಯ ಮಕ್ಕಳು ಸರ್ವ ಆತ್ಮರಿಗೆ ದಯೆ ತೋರಿಸಬೇಕು. ಈ ದಯಾ ಭಾವನೆಯಿಂದ ಎಂತಹ ಆತ್ಮರಾದರೂ ಬದಲಾವಣೆ ಆಗಬಹುದು. ಇಡೀ ದಿನದಲ್ಲಿ ಎಷ್ಟು ದಯಾಹೃದಯಿಗಳಾದಿರಿ ಎಂದು ಪರಿಶೀಲನೆ ಮಾಡಿಕೊಳ್ಳಿ. ಎಷ್ಟು ಆತ್ಮರ ಮೇಲೆ ದಯೆ ತೋರಿಸಿದಿರಿ. ಬೇರೆಯವರಿಗೆ ಸುಖ ಕೊಡುವುದರಿಂದ ತಮ್ಮಲ್ಲಿ ಸುಖ ತುಂಬುವುದು. ಕೊಡುವುದು ಎಂದರೆ ಪಡೆಯುವುದು, ಬೇರೆಯವರಿಗೆ ಸುಖ ಕೊಡುವುದರಿಂದ ಸ್ವತಃ ಸುಖ ಸ್ವರೂಪರಾಗುವಿರಿ. ಯಾವುದೇ ವಿಘ್ನಗಳು ಬರುವುದಿಲ್ಲ. ದಾನ ಮಾಡುವುದರಿಂದ ಶಕ್ತಿ ಸಿಗುತ್ತದೆ. ಕುರುಡರಿಗೆ ಕಣ್ಣು ಕೊಡುವುದು ಎಷ್ಟು ಪುಣ್ಯದ ಕೆಲಸವಾಗಿದೆ? ಇದೇ ತಮ್ಮೆಲ್ಲರ ಕಾರ್ಯವಾಗಿದೆ. ಅಜ್ಞಾನಿ ಕುರುಡರಿಗೆ ಜ್ಞಾನದ ಕಣ್ಣುಗಳನ್ನು ಕೊಡುವುದು ಮತ್ತು ತಮ್ಮ ಸ್ಥಿತಿ ಸದಾ ಆಚಲವಾಗಿರಲಿ. ಮಕ್ಕಳ ಸ್ಥಿತಿಯ ಸ್ಮೃತಿಚಿಹ್ನೆಯೇ ಆಚಲಗಡ ಆಗಿದೆ. ಬಾಪ್ ದಾದಾ ಹೇಗೆ ಏಕರಸವಾಗಿರುತ್ತಾರೋ ಹಾಗೆಯೇ ಮಕ್ಕಳೂ ಏಕರಸವಾಗಿರಬೇಕು. ಯಾವಾಗ ಒಬ್ಬನ ರಸದಲ್ಲಿರುವಿರೋ ಆಗ ಏಕರಸ ಸ್ಥಿತಿಯಲ್ಲಿರುವಿರಿ, ಒಳ್ಳೆಯದು.

ಅವ್ಯಕ್ತ ಮುರಳಿ 26-01-1970.

***ಸ್ಮೃತಿ ಯಾತ್ರೆಯ ಸಂಪೂರ್ಣ ಸ್ಥಿತಿ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಶಾಂತ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ದೇಹ ಮತ್ತು ದೇಹಿ (ಆತ್ಮ) ಎರಡೂ ಬೇರೆ ಎಂದು ಅನುಭವ ಮಾಡಿಕೊಂಡು ಸ್ಮೃತಿಯಾತ್ರೆಯ ಸಂಪೂರ್ಣ ಸ್ಥಿತಿಗೆ ತಲುಪಿದ್ದೇನೆ.

2. ನಾನು ಅತಿಥಿಯೆಂದು ಭಾವಿಸಿ, ಅತೀತ ಸ್ಥಿತಿಗೆ ತಲುಪಿದ್ದೇನೆ.

3. ನಾನು ಮನಸ್ಸನ್ನು ಅವ್ಯಕ್ತ ಸ್ಥಿತಿಯಲ್ಲಿ ತನುವನ್ನು ವ್ಯಕ್ತ ದೇಶದಲ್ಲಿ ಇರುವಂತೆ ಅನುಭವ ಮಾಡುತ್ತಿದ್ದೇನೆ.

4. ನಾನು ಮಧುರತೆ & ಸ್ನೇಹದಿಂದ ಬೇಹದ್ ವೈರಾಗ್ಯ ವೃತ್ತಿಯನ್ನು ಧಾರಣೆ ಮಾಡಿ ಯಾವ ಪರಿಸ್ಥಿತಿಯನ್ನಾದರೂ ಸಹಜವಾಗಿ ಎದುರಿಸಬಲ್ಲ ಸಫಲತೆಯ ನಕ್ಷತ್ರ.

5. ನಾನು ಸದಾ ಸಫಲತೆಯ ನಕ್ಷತ್ರ ಎಂಬ ನಿಶ್ಚಯದಿಂದ ಸಫಲತೆಯನ್ನು ಹೊಂದಿರುವ ವಿಜಯೀ ಸ್ವರೂಪ.

6. ನಾನು ಶಕ್ತಿಶಾಲಿ ಸ್ಮೃತಿಯಿಂದ ಶಕ್ತಿಶಾಲಿ ಕರ್ಮವನ್ನು ಆಚರಿಸುವ ಸಫಲತಾ ಸ್ವರೂಪ.

7. ನಾನು ಸಂಗಮ ಯುಗದಲ್ಲಿ ವಿಜಯೀ ತಿಲಕಧಾರಿ, ಭವಿಷ್ಯದಲ್ಲಿ ರಾಜ್ಯ ತಿಲಕಧಾರಿ.

8. ನಾನು ಸದಾ ಸಹಾಯ ಪಡೆಯುವ ಸಹಯೋಗಿ.

9. ನಾನು ಎಲ್ಲರಿಗೂ ಆತ್ಮಿಕ ಸ್ನೇಹ ಅವನ್ನು ಕೊಟ್ಟು ಸಹಯೋಗಿಯಾಗಿ, ಮಾಯಾ ವಿಘ್ನಗಳ ಮೇಲೆ ವಿಜಯವನ್ನು ಪಡೆಯಲು ಸಹಯೋಗವನ್ನು ಪಡೆದಿದ್ದೇನೆ.

10. ನಾನು ಸ್ನೇಹವೆಂಬ ದಾರದಿಂದ ಇಡೀ ಕಲ್ಪಕ್ಕಾಗಿ ಇಲ್ಲೇ ಸಂಬಂಧಗಳನ್ನು ತಯಾರಿಸಿಕೊಂಡಿದ್ದೇನೆ.

11. ನಾನು ಅನೇಕರ ಸಂಬಂಧವನ್ನು ಕತ್ತರಿಸಿ ಒಬ್ಬನ ಸ್ನೇಹದೊಂದಿಗೆ ಜೋಡಿಸಲ್ಪಟ್ಟಿರುವ ಪರಿಪಕ್ವ ಸ್ವರೂಪ.

12. ನಾನು ಮನಸ್ಸಿನಲ್ಲಿ ಶುದ್ಧ ಸಂಕಲ್ಪಗಳನ್ನು ಮನನ ಮಾಡುತ್ತಾ ವ್ಯರ್ಥ ಸಂಕಲ್ಪಗಳನ್ನು ಸಮಾಪ್ತಿ ಮಾಡಿರುವ ತೀವ್ರ ಪುರುಷಾರ್ಥಿ.

13. ನಾನು ಸಮಯದ ವೇಗಕ್ಕಿಂತ ಪುರುಷಾರ್ಥದ ಗತಿಯನ್ನು ತೀವ್ರ ಮಾಡಿಕೊಂಡು ಸಮಯಕ್ಕಿಂತ ಮೊದಲೇ ತಯಾರಾಗಿದ್ದೇನೆ.

14. ನಾನು ಬುದ್ಧಿ ಲೈನ್ ಅನ್ನು ಒಬ್ಬ ತಂದೆಯೊಂದಿಗೆ ಜೋಡಿಸಿ ಅನೇಕ ಬಂಧನಗಳನ್ನು ಕತ್ತರಿಸಿ, "ನನಗೆ ಒಬ್ಬ ಬಾಬಾ ಹೊರತು ಮತ್ಯಾರೂ ಇಲ್ಲ" ಎಂಬ ಸ್ಥಿತಿಗೆ ತಲುಪಿದ್ದೇನೆ.

15. ನಾನು ಸದಾ ಗಮನವಿಟ್ಟು ಶಕ್ತಿಶಾಲಿ ಸಂಕಲ್ಪಗಳನ್ನು ಮಾಡಿ ನನಗಾಗಿ ಸತ್ಯಯುಗೀ ಸೃಷ್ಟಿಯನ್ನು ತಯಾರು ಮಾಡಿಕೊಂಡಿದ್ದೇನೆ.

16.ನಾನು ಸಂಜೀವಿನಿ ಮೂಲಿಕೆಯನ್ನು (ಶಿವತಂದೆ) ಸದಾ ಜೊತೆಗಿಟ್ಟುಕೊಂಡು ಸಮರ್ಥ ಸಂಕಲ್ಪಗಳನ್ನು ಮಾಡುವ ತೀವ್ರ ಪುರುಷಾರ್ಥಿ.

17. ನಾನು ನನ್ನ ನಡತೆಯಿಂದ ಲೌಕಿಕ ಸಂಬಂಧಿಕರನ್ನು ಕೂಡ ಆಕರ್ಷಣೆ ಮಾಡಿದ್ದೇನೆ.

18. ನಾನು ಈ ಸಂಗಮ ಯುಗದ ಪ್ರತಿಕ್ಷಣದಲ್ಲಿ ಪದಮದಷ್ಟು ಸಂಪಾದನೆ ಮಾಡಿಕೊಂಡಿದ್ದೇನೆ.

19. ನಾನು ನನ್ನ ಶಕ್ತಿಶಾಲಿ ಸ್ಥಿತಿಯಿಂದ ಪರಿಸ್ಥಿತಿಯನ್ನು ಬದಲಾಯಿಸಬಲ್ಲ ಮಾಸ್ಟರ್ ರಚಯಿತನು

20. ನಾನು ವಾಯುಮಂಡಲವನ್ನು ಶುದ್ಧವಾಗಿಸಿ ಎಂತಹ ಪರಿಸ್ಥಿತಿ ಬಂದಾಗಲೂ ನನ್ನ ಸ್ಥಿತಿಯನ್ನು ಶಕ್ತಿಶಾಲಿಯಾಗಿಟ್ಟುಕೊಂಡು ಸೃಷ್ಟಿ ಪರಿವರ್ತನೆ ಮಾಡಿರುವ ಶಕ್ತಿ ಸ್ವರೂಪ.

21. ನಾನು ಸಿಂಹದ ಮೇಲೆ ಸವಾರಿ ಮಾಡಿ ಮಾಯೆಯ ಶಕ್ತಿಯನ್ನು ಸಮಾಪ್ತಿ ಮಾಡಿರುವ ಶಕ್ತಿ ಸ್ವರೂಪ.

22. ನಾನು ಪೂರ್ಣಚಂದ್ರನಂತೆ ಮುಖವನ್ನು ಸುಂದರವಾಗಿ ಹರ್ಷಿತವಾಗಿ ಮತ್ತು ದರ್ಪಣದಂತೆ ತಯಾರು ಮಾಡಿಕೊಂಡಿರುವ ಪದಮಾ ಪದಂ ಭಾಗ್ಯಶಾಲಿ.

23. ನಾನು ದಯಾ ಭಾವನೆಯಿಂದ ಸರ್ವಾತ್ಮರಿಗೆ ಸುಖವನ್ನು ಕೊಡುವುದರ ಮುಖಾಂತರ ಸುಖವನ್ನು ಪಡೆದಿರುವ ಸುಖ ಸ್ವರೂಪ.

24. ನಾನು ಅಜ್ಞಾನವೆಂಬ ಅಂಧಕಾರದಲ್ಲಿರುವ ಆತ್ಮಿಕ ಸಹೋದರರೆಲ್ಲರಿಗೂ ಜ್ಞಾನವೆಂಬ ನೇತ್ರವನ್ನು ಕೊಟ್ಟಿರುವ ಜ್ಞಾನ ಸ್ವರೂಪ.

25. ನಾನು ನನ್ನ ಸ್ಥಿತಿಯನ್ನು ಸದಾ ಅಚಲವಾಗಿರಿಸಿಕೊಂಡಿದ್ದೇನೆ (ಅಚಲ್ ಗರ್).